

# ತುಳಸಿನೋ ಎಲ್ಸಿನೋ ಐಷಳೋ

ನಗರದಿಂದ ಹೊರಟಿರುವ ಕೊನೆಯ ಬಸ್ಸಿನಲ್ಲಿ
ಮುಂದಿನ ಸೀಟಿನ ಕೊನೆಯಲ್ಲಿ
ಕುಳಿತಿರುವವಳ ಹೆಸರು
ತುಳಸಿನೋ ಎಲ್ಸಿಯೋ ಐಷಳೋ ಆಗಿರಬಹುದು
ಯಾರಾದರೇನು?
ಅವಳು ಒಬ್ಬಂಟಿ.

ಏಳೂವರೆಯ ತಣ್ಣನೆಯ ಗಾಳಿಯಲ್ಲಿ
ಹಾರಾಡುತ್ತಿರುವ ಕೂದಲನ್ನು ಒಪ್ಪಗೊಳಿಸದೆ,
ನರಗಳು ಎದ್ದು ಕಾಣುವ
ಒರಟೊರಟಾದ ಮೊಣಕೈಯಿಂದ
ಪ್ಲಾಸ್ಟಿಕ್ ಕವರನ್ನು ಎದೆಗೊತ್ತಿ ಹಿಡಿದು
ಶೂನ್ಯ ದೃಷ್ಟಿಗಳನ್ನು ದೂರದತ್ತ ನೆಟ್ಟಿರುವವಳು
ತುಳಸಿನೋ ಎಲ್ಸಿನೋ ಐಷಳೋ ಆಗಿರಲಿ.
ಯಾರಾದರೇನು? ಅವಳು ಒಬ್ಬಂಟಿ.

ಅವಳ ಕೂದಲೆಳೆಗಳನ್ನು ಮತ್ತೊಂದು ಕೈ
ನೇವರಿಸಿ ಒಪ್ಪಗೊಳಿಸಿಲ್ಲ
ಕೈಯಲ್ಲಿ ಮತ್ತೊಂದು ಕೈ ಉಪಶಮಿಸಿಲ್ಲ
ಕಣ್ಣಲ್ಲಿ ಮತ್ತೊಂದು ಕಣ್ಣು ಬೆಳಗಿಲ್ಲ
ಕೆನ್ನೆಗಳು ಅನಿರೀಕ್ಷಿತ ದಕ್ಕಿದ ಒಂದು ಚುಂಬನದಲ್ಲಿ
ಪುಷ್ಪಿಸಿ ತೊನೆದಾಡಿಲ್ಲ.
ಅವಳ ನೆನಪಿನಲ್ಲಿ
ಜೊತೆಯಾಗಿ ಕಂಡ ಬೆಳುದಿಂಗಳಿಲ್ಲ
'ಒಂದು ಛತ್ರಿಯ ಕೆಳಗೆ' ನಡೆದುಹೋದ ಶಾಲೆಯಿಲ್ಲ
ಜೊತೆಗೂಡಿ ತಿಂದ ಬಿರಿಯಾನಿಯಿಲ್ಲ
ಅದಕ್ಕೆ ಬದಲಾಗಿ,
ಬೆಳಕಿಲ್ಲದ ಮನೆಯಲ್ಲಿ
ಒಲೆಯ ದಿಬ್ಬದ ಮೇಲೆ ಬೆಳಿಗ್ಗೆ ಮುಚ್ಚಿಟ್ಟಿರುವ
ಅನ್ನವನ್ನು, ಕಡ್ಲೇಗೊಜ್ಜನ್ನು
ಮುಚ್ಚಲು ಸಾಧ್ಯವಾಗದ ಕಿಟಕಿಯಿಂದ ಜಿಗಿವ
ಬೆಕ್ಕು ತಿನ್ನದೆ ಉಳಿದಿರಲೆಂಬ ಪ್ರಾರ್ಥನೆ ಮಾತ್ರ.
ಮನೆ ಮನೆಗೂ ಹೋಗಿ ದುಡಿದು ಸಂಪಾದಿಸಿದ

ಒಬ್ಬ ಭ್ರಷ್ಟನನ್ನು,
ಲಂಚಕೋರನನ್ನು ಮದುವೆಯಾಗಬಹುದು
ಕೊಟ್ಟಿದ್ದಕ್ಕೆ ಪ್ರತಿಫಲ ಲಭಿಸುತ್ತದೆ
ಒಬ್ಬ ಸ್ತ್ರೀಲಂಪಟನನ್ನು ಮದುವೆಯಾಗಬಹುದು
ಉಡುಗೊರೆಗಳಿಗೂ ಪ್ರಶಂಸೆಗಳಿಗೂ
ಕೊರತೆಗಳಿರುವುದಿಲ್ಲ
ಒಬ್ಬ ಸುಳ್ಳನನ್ನು ಮದುವೆಯಾಗಬಹುದು
ಹುಸಿಗಳಲ್ಲೂ ಕವಿತೆಗಳಿರುತ್ತವೆ
ಒಬ್ಬ ಸಂಶಯರೋಗಿಯನ್ನು
ಮದುವೆಯಾಗಬಹುದು
ಸದಾ ಜೊತೆಗಿರುತ್ತಾನೆ.

ಆದರೆ, ಕನಸುಗಳೇ ಇಲ್ಲದವನನ್ನು
ತೃಪ್ತನನ್ನು
ಆಸೆಗಳಿಲ್ಲದವನನ್ನು,
ಬೇಸರವಿಲ್ಲದವನನ್ನು
ರೋಷಾವೇಶಗೊಳ್ಳದವನನ್ನು,
ಅಳದವನನ್ನು
ಖಂಡಿತವಾಗಿಯೂ ಮದುವೆಯಾಗಬಾರದು.
ಯಾಕೆಂದರೆ
ಸತ್ತವನ ಸಂಗಡ
ಬದುಕಬೇಕಾಗಿ ಬರುತ್ತದೆ
ಆತ್ಮಹತ್ಯೆ ಮಾಡಿಕೊಳ್ಳುವವರೆಗೆ.